VIJAYAKUMAR KANNUR

Digitally signed by VIJAYAKUMAR KANNUR
Date: 2025.12.02 11:04:03 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 01.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಹೆಚ್ ವಕೀಲರಿಂದ :**

ಆರೋಪಿ ನನಗೆ ಸಂಬಂಧಿಯಾಗಬೇಕು ಎಂದರೆ ಸರಿ. ಬಾಗಲಕೋಟ ತಾಲೂಕಿನ ಶಿರೂರ ಗ್ರಾಮದವರು. ಆರೋಪಿಯ ಹೆಸರಿನಲ್ಲಿ ಶಿರೂರ ಗ್ರಾಮದಲ್ಲಿ ಹೊಲ ಮತ್ತು ಮನೆ ಇರುವವು ಎಂದರೆ ಸರಿ. ಆರೋಪಿ ಖಾಸಗಿಯಾಗಿ ಕೆಲಸ ಮಾಡುತ್ತಿರುವನು ಎಂದರೆ ಬಟ್ಟೆಯ ವ್ಯಾಪಾರ ಮಾಡುತ್ತಿರುವುದಾಗಿ ಸಾಕ್ಷಿ ಉತ್ತರಿಸುವರು. ಆತ ಲೈಸೆನ್ಸ ಹೊಂದಿರುವನು ಇಲ್ಲವೋ ಎಂದು ನಾನು ನೋಡಿರುವುದಿಲ್ಲ.

2. ಆರೋಪಿ ಫೆಬ್ರುವರಿ 2 ನೇ ವಾರದಲ್ಲಿ ತಿಂಗಳ 2023 ರಲ್ಲಿ ಹಣ ಕೇಳಲು ಬಂದಿದ್ದನು. ಆದರೆ ಆತ ಹಣ ಕೇಳಲು ಬಂದ ನಿರ್ದಿಷ್ಟವಾದ ನನಗೆ ಹೇಳಲು ಬರುವುದಿಲ್ಲ. ಆರೋಪಿ ತನಗೆ ಹಣಕಾಸಿನ ಸಮಸ್ಯೆ ಇರುವುದಾಗಿ ಎಂದು ಹೇಳಿ ಹಣ ಪಡೆದುಕೊಳ್ಳಲು ಬಂದಿದ್ದನು. ಆರೋಪಿಗೆ ಯಾವ ಹಣಕಾಸಿನ ಸಮಸ್ಯೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ನನ್ನ ಗಂಡನಿಗೆ ಆತ ಹೇಳಿರುವನು. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆರೋಪಿಗೆ ಹಣ ನೀಡುವಾಗ ಯಾರ ಸಮಕ್ಷಮದಲ್ಲಿ ಹಣ ನೀಡಿರುವೆನು ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಹಿರಿಯರು ಯಾರು ಇದ್ದರು ಎಂಬುದರ ಬಗ್ಗೆ ನನ್ನ ಗಂಡನಿಗೆ ಮಾಹಿತಿ ಇರುವುದು.

3. ನನ್ನ ಬ್ಯಾಂಕ್ ಖಾತೆಯಿಂದ ಆರೋಪಿಗೆ ಹಣ ವರ್ಗಾವಣೆ ಮಾಡಿರುವ ಖಾತೆ ನಂಬರ ನನಗೆ ನೆನಪಿರುವುದಿಲ್ಲ. ಆದರೆ ಕರ್ನಾಟಕ ಬ್ಯಾಂಕ ಖಾತೆಯಿಂದ ಹಣ ವರ್ಗಾವಣೆ

ಆಗಿರುವುದು. ದಿಃ 22.02.2023 ರಂದು ರೂ. 1 ಲಕ್ಷ 40 ಸಾವಿರ, ದಿಃ 24.02.2023 ರಂದು ರೂ. 1 ಲಕ್ಷ 50 ಸಾವಿರ, ದಿಃ 07.03.2023 ರಂದು ರೂ. 2 ಲಕ್ಷ ಹಣ ವರ್ಗಾವಣೆ ಆಗಿರುವುದು. ಆರೋಪಿಯ ಖಾತೆಗೆ ಹಣ ವರ್ಗಾವಣೆ ಮಾಡಿರುವೆವು. ಈ ಹಣ ವರ್ಗಾವಣೆ ಮಾಡಿದ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಣ ನೀಡಿದ ಬಗ್ಗೆ ನಾನು ಸ್ವಂತ ಆರೋಪಿಗೆ ನೋಟಿಸು ನೀಡಿರುವುದಿಲ್ಲ. ನನ್ನ ಗಂಡನಿಗೆ ನೋಟಿಸು ನೀಡುವಂತೆ ನಾನು ಅಧಿಕಾರ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಈ ಹಣ ವರ್ಗಾವಣೆ ಮಾಡಿದ ಬಗ್ಗೆ ಆರೋಪಿಯ ಕಡೆಯಿಂದ ರಶೀದಿಯನ್ನು ಪಡೆದುಕೊಂಡಿರುವುದಿಲ್ಲ.

4. ನಮ್ಮ ಮನೆತನದ ಅಡಚಣೆಯ ಸಲುವಾಗಿ 2021 ರಲ್ಲಿ ನನ್ನ ಗಂಡ ಒಂದು ಜಮೀನು ಮಾರಾಟ ಮಾಡಿರುವನು ಎಂದರೆ ಸರಿ. ನನ್ನ ಖಾತೆಯಲ್ಲಿ ಹಣ ಇತ್ತು, ನಮ್ಮ ಕುಟುಂಬದ ಜಮೀನುಗಳಿಂದ ಆದಾಯ ಇತ್ತು ಮತ್ತು ನನ್ನ ಖಾತೆಯ ಮೂಲಕ ಆರೋಪಿಯ ಖಾತೆಗೆ ಹಣ ವರ್ಗಾವಣೆ ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ನೀಡಿರುವ ನೋಟಿಸಿಗೆ ಆರೋಪಿ ಪ್ರತ್ಯುತ್ತರವನ್ನು ನೀಡಿದ್ದು ಅದರಲ್ಲಿ ಯಾವುದೇ ಹಣ ಕೊಡುವುದು ಮತ್ತು ತೆಗೆದುಕೊಳ್ಳುವುದು ಇರುವುದಿಲ್ಲ ಅಂತ ಬರೆಸಿರುವರು ಎಂದು ನಿಜವಿರುವುದಿಲ್ಲ ನನ್ನ ಮತ್ತು ನನ್ನ ಗಂಡನ ಹೆಸರಿನಲ್ಲಿ ಜಂಟಿ ಖಾತೆ ಇರುವುದಿಲ್ಲ ಎರಂದೆ ಸರಿ. ನಾನು ನನ್ನ ಗಂಡನ ಮಾತುಕೇಳಿಕೊಂಡು ಆರೋಪಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿರುವಂತೆ 3 ದಿನಾಂಕಗಳಂದು ಆರೋಪಿಗೆ ಖಾತೆಗೆ ರೂ. 4 ಲಕ್ಷ 90 ಸಾವಿರ ಹಣ ವರ್ಗಾವಣೆ ಮಾಡಿರುವುದಿಲ್ಲ ಅಂತ ಸೂಚಿಸವುದು ಸರಿಯಲ್ಲ. ಈ ಪ್ರಕರಣದಲ್ಲಿನನಗೆ ಸಾಕ್ಷಿ ನುಡಿಯುವಂತೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ನನ್ನ ಗಂಡ ಮಾಹಿತಿ ನೀಡಿರುವನು ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ನನ್ನ ಖಾತೆಯಿಂದ ನೀಡಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ. ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.12.02 11:04:09 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ